CC No.434/2019
CW-4, PW-2

. ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

**ಸಿಸಿ ನಂ. 434/2019**

ಚಾಸಾ-4 ಪ್ರಾಸಾ-2

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ:05.06.2025.

ಹೆಸರು ಃ ಸುರೇಶ

ತಂದೆಯ ಹೆಸರು ಃ ಶಿವಯೋಗಪ್ಪ

ವಯಸ್ಸು ಃ 40 ವರ್ಷ

ಉದ್ಯೋಗ ಃ ಎ.ಎಸ್.ಐ. ಯಡ್ರಾಮಿ ಪೊಲೀಸ ಠಾಣೆ

ವಾಸಸ್ಥಳ ಃ ಯಡ್ರಾಮಿ

ಃ ಮುಖ್ಯ ವಿಚಾರಣೆ ಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

2017 ರಿಂದ 2021 ರ ವರೆಗೆ ಅಫಜಲಪೂರ ಪೊಲೀಸ ಠಾಣೆಯಲ್ಲಿ ಪೊಲೀಸ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 08.01.2018 ರಂದು ನಾನು ಮತ್ತು ಚಾಸಾ 5 ರವರು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಾಸಾ 1 ರವರಿಗೆ ಶಿವಪೂರ, ಬನ್ನಟ್ಟಿ ಗ್ರಾಮಗಳಲ್ಲಿ ಅಕ್ರಮವಾಗಿ ಮರಳು ವ್ಯವಹಾರ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದಿದ್ದರಿಂದ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿರುತ್ತಾರೆ. ಅದರಂತೆ ನಾನು ಚಾಸಾ 2 ಮತ್ತು 3 ರವರನ್ನು ಕರೆದುಕೊಂಡು ಬಂದಿರುತ್ತೇನೆ. ಸಮಯ 4.20 ಕ್ಕೆ ನಾವು ಠಾಣೆಯಿಂದ ಹೊರಟ್ಟಿರುತ್ತೇವೆ. ನಾವು ಬನ್ನಟ್ಟಿ ಗ್ರಾಮಕ್ಕೆ ಹೊಗುತ್ತಿರುವಾಗ ಬನ್ನಟ್ಟಿ ಕ್ರಾಸ ಹತ್ತಿರ ನಮ್ಮ ಎದುರಿಗೆ ಒಂದು ಮರಳು ತುಂಬಿದ ಟ್ರ್ಯಾಕ್ಟರ ಬರುತ್ತಿರುವುದು ಕಾಣಿಸಿರುತ್ತದೆ. ನಾವು ನಮ್ಮ ವಾಹನವನ್ನು ನಿಲ್ಲಿಸಿ ಆತನನ್ನು ಹಿಡಿಯಲು ಹೋಗುವಷ್ಟರಲ್ಲಿ ಟ್ರ್ಯಾಕ್ಟರ ಚಾಲಕನು ಟ್ರ್ಯಾಕ್ಟರ ಅನ್ನು ಬಿಟ್ಟು ಓಡಿ ಹೊಗಿರುತ್ತಾನೆ. ಬಿಟ್ಟು ಹೋದ ಟ್ರ್ಯಾಕ್ಟರ ಅನ್ನು ಪರಿಶೀಲನೆ ಮಾಡಿ ನೋಡಿದಾಗ ಟ್ರಾಕ್ಟರ ಮತ್ತು ಟ್ರ್ಯಾಲಿಗೆ ನೊಂದಣಿ ಸಂಖ್ಯೆ ಇಲ್ಲದೆ ಇರುವುದು ಕಂಡು ಬಂದಿರುತ್ತದೆ. ತದನಂತರ ಚಾಸಾ 1 ರವರು ಚಾಸಾ 2 ಮತ್ತು 3 ರವರ ಸಮಕ್ಷಮ ಟ್ರಾಕ್ಟರ ಮತ್ತು ಟ್ರ್ಯಾಲಿಯನ್ನು ಜಪ್ತಿ ಪಡಿಸಿಕೊಂಡು 4.40 ರಿಂದ 5.40 ಗಂಟೆ

ವರೆಗೆ ಜಪ್ತಿ ಪಂಚನಾಮೆಯನ್ನು ಬರೆದುಕೊಂಡು ನಂತರ ಸಮಯ ಸುಮಾರು 6.15 ಗಂಟೆಗೆ ಗುನ್ನೆ ಸ್ಥಳದಿಂದ ಹೊರಟು ಠಾಣೆಗೆ ಬಂದು ಆರೋಪಿತನ ವಿರುದ್ಧ ಪ್ರಕರಣ ದಾಖಲಿಸಿರುತ್ತೇವೆ. ಮರು ದಿನ ನಾನು ಈ ಕುರಿತು ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಗೆ ಜಪ್ತಿ ಪಡಿಸಿಕೊಂಡರು ಎಂದು ಹೇಳುವ ಟ್ರ್ಯಾಕ್ಟರನ ಭಾವಚಿತ್ರ ಗಳನ್ನು ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-7 ರಿಂದ ನಿಪಿ-10 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ **SSP** ವಕೀಲರಿಂದಃ-</u>

ಚಾಸಾ 2 ಮತ್ತು 3 ರವರು ನಮ್ಮ ಠಾಣೆಯ ಸುಮಾರು ಪ್ರಕರಣಗಳಲ್ಲಿ ಪಂಚ ಸಾಕ್ಷಿಗಳಾಗಿರುತ್ತಾರೆ ಎಂದರೆ ಸರಿ. ಜಪ್ತಿ ಪಂಚನಾಮೆಯ ಚೆಕ್ ಬಂದಿಯು ಪೂರ್ವಕ್ಕೆಃ ಘತ್ತರಗಿ ರಸ್ತೆ, ಪಶ್ಚಿಮಕ್ಕೆಃ ಶಿವಪೂರ ಬನ್ನಟ್ಟಿ ಗ್ರಾಮದ ಜಮೀನುಗಳು ಇರುಎತ್ತವೆ, ಉತ್ತರಕ್ಕೆಃ ಶಿವಪೂರ ಬನ್ನಟ್ಟಿಗೆ ಹೋಗುವ ರಸ್ತೆ, ದಕ್ಷಿಣಕ್ಕೆಃ ಅಫಜಲಪೂರಕ್ಕೆ ಬರುವ ರಸ್ತೆ ಇರುತ್ತದೆ. ಜಪ್ತಿ ಕಾಲಕ್ಕೆ ವಾಹನದ ಫೋಟೋವನ್ನು ತೆಗೆದುಕೊಂಡಿರಬಹುದು. ಬನ್ನಟ್ಟಿ ಕ್ರಾಸಿನ ಹತ್ತಿರ ಯಾವತ್ತು ಜನರೂ ಇರುತ್ತಾರೆ ಎಂದರೆ ಸರಿ. 2018 ನೇ ಸಾಲಿನಲ್ಲಿ ಬನ್ನಟ್ಟಿ ಕ್ರಾಸನ ಹತ್ತಿರ ಚೆಕ್ ಪೋಸ್ಟ ಹಾಕಿದ್ದರು ಎಂದರೆ ಸರಿಯಲ್ಲ. ನಾನು, ಚಾಸಾ 1 ರಿಂದ ಚಾಸಾ 3 ರವರು ಬನ್ನಟ್ಟಿ ಶಿವಪೂರ ಗ್ರಾಮಕ್ಕೆ ದಾಳಿ ಮಾಡಲು ಹೋಗಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-7 ರಿಂದ 10 ರಲ್ಲಿ ತೋರಿಸಿದ ಟ್ರ್ಯಾಕ್ಟರನಲ್ಲಿ ಮರಳು ಇಲ್ಲ ಎಂದರೆ ಸರಿ . ಆರೋಪಿಯು ಟ್ರ್ಯಾಕ್ಟರನಲ್ಲಿ ಮರಳು ಸಾಗಾಣಿಕೆ ಮಾಡುತ್ತಿದ್ದಾಗ ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ ಎಂದು ಮತ್ತು ನಾವು ಸದರಿ ವಾಹನವನ್ನು ಜಪ್ತಿ ಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ನೀಡಿದ ದೂರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ